doc-563
T-P-2

Reg No B G 155

15 — 10 — 72

In The State **First Golden Jubilee Celebrated Paper 'Satyavadi' daily, Mysore 4**

56 th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟವಾದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಶಿಕ್ಷಣ ಕ್ರಮದಲ್ಲಿ ಬದಲಾವಣೆಗೆ ಕೇಂದ್ರ ಸರಕಾರದ ಯೋಚನೆ

ಎಂ. ಜಿ ಆರ್ ಪ್ರಕರಣ

ಮದರಾಸು— ಶನಿವಾರ ನಡೆದ ಡಿಎಂಕೆ ಜನರಲ್ ಕೌನ್ಸಿಲ್ ವಿಾಟಿಂಗಿನಲ್ಲಿ ರಾಮಚಂದ್ರರನ್ನು ಸಸ್ಪೆಂಡುಮಾಡಿರುವದಕ್ಕೆ ಸಮ್ಮತಿಸಿತು: ಯಾವ ರಾಜೀಕಾರ್ಯಕ್ಕೂ ಹೈ ಕಮಾಂಡ್ ಹೋಗಬಾರದೆಂದು ತಿಳಿಸಲಾಯಿತು ; ಈ ಕಾರ್ಯದಿಂದ ಪಾರ್ಟಿ ಒಡೆಯುವದಕ್ಕೆ ಅವಕಾಶವಾಯಿತೆನ್ನಲಾಗುತ್ತಿದೆ — ಪಾರ್ಟಿಯ ಇನ್ನೂ ಕೆಲವರ ಮೇಲೆ ಕ್ರಮ ಕೈಗೊಳ್ಳಲಾಗುವದಂತೆ

ಭೂಪರಿಮಿತಿ

ಬೆಂಗಳೂರು— ಭೂ ಸುಧಾರಣೆ (ತಿದ್ದುಪಡಿ) ಮಸೂದೆಯಲ್ಲಿನ 10 ಎಕ್ರೆ ಪರಿಮಿತಿ 18 ಎಕ್ರೆ ಇರಬೇಕೆಂದು ಈ ಸಂಬಂಧದ ವಕೀಲರ ಸಂಘದ ಉಪ ಸಮಿತಿ ಸಲಹೆಮಾಡಿದೆ

★

ಗುಜರಿ ಸ್ಥಳ ಬದಲಾವಣೆ

ಮೈಸೂರು-ಗುಜರಿಯನ್ನು ವೆಲಿಂಗ್ಡ್ ಲಾಡ್ಜ್ ಕಾಂಪೌಂಡಿಗೆ ವರ್ಗಾಯಿಸುವ ಸಮಾರಂಭವನ್ನು ತಾ ॥ 19 ರಂದು ಬೆಳಿಗ್ಗೆ ವಿದ್ಯಾಮಂತ್ರಿ ಶ್ರೀ ಬದ್ರಿನಾರಾಯಣ್ ರವರು ನೆರವೇರಿಸುವರು : ಪ್ರವಾಸ ಇತ್ಯಾದಿಗಳ ಮಂತ್ರಿ ಶ್ರೀ ಅಜೀಜ್ ಸೇಟ್ ರವರು ಅಧ್ಯಕ್ಷತೆ ವಹಿಸುವರು

★

ಬಸ್ ಸ್ಟೇಷ

ಮೈಸೂರು— ಬಸ್ ಸ್ಟೇಷನ್ನಿನ ಕಟ್ಟಡವ ಶಂಕು ಸ್ಥಾಪನೆಯನ್ನು ಮುಖ್ಯ ಮಂತ್ರಿ ಶ್ರೀ ವೀರೇಂದ್ರಪಾಟೀಲ್ ರವರು ತಾ ॥ 17 ರಂದು ಮಧ್ಯಾಹ್ನ ಸ್ವರ 2-45 ಕ್ಕೆ ನೆರವೇರಿಸುವರು ; ಪ್ರವಾಸ ಇತ್ಯಾದಿಗಳ ಮಂತ್ರಿ ಶ್ರೀ ಅಜೀಜ್ ಸೇಟ್ ರವರು ಅಧ್ಯಕ್ಷತೆ ವಹಿಸುವರು.

ಮೈಸೂರು ಕಾಂಗ್ರೆಸ್‌ನಲ್ಲೂ ಸಸ್ಪೆಂಡ್

ಬೆಂಗಳೂರು— ಶಾಸಕ ಶ್ರೀ ಎಸ್ ಎಂ ಚಂದ್ರಶೇಖರ್ ರವರು ಶಿವಮೊಗ್ಗಾದಲ್ಲಿ ಪ್ರಧಾನಿಯರ ವಿಷಯದಲ್ಲಿ ಆಕ್ಷೇಪಣೀಯ ಭಾಷಣ ಮಾಡಿದ ಆಪಾದನೆಗಾಗಿ ಮೈಸೂರು ಕಾಂಗ್ರೆಸ್‌ನಲ್ಲಿ ಅವರನ್ನು ಸಸ್ಪೆಂಡು ಮಾಡಲಾಗಿದೆ ; ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದೂ ಶೋ ಕಾಸ್ ನೋಟೀಸು ಕೊಡಲಾಗುವುದೆಂದೂ ಗೊತ್ತಾಗಿದೆ.

ತಲಕಾವೇರಿ ತೀರ್ಥೋದ್ಭವ

ಮಡಕೇರಿ— ತಲಕಾವೇರಿ ತೀರ್ಥೋದ್ಭವ ಕಾಲಕ್ಕೆ ಹೋಗುವ ಯಾತ್ರಿಕರಿಗಾಗಿ ಕುಶಾಲನಗರದಿಂದ ತಲಕಾವೇರಿಗೆ 14 ರಾಜ್ಯ ಸಾರಿಗೆ ಬಸ್‌ಗಳು ತಾ ॥ 16 ರಾತ್ರಿಯಿಂದ ತಾ ॥ 17 ಬೆಳಿಗ್ಗೆ ವರೆಗೆ ಹೋಗುವವು — 17 ರಂದು ತಲಕಾವೇರಿಯಲ್ಲಿ ಶ್ರೀ ಗಣೇಶ ದೇವಾಲಯವನ್ನು ವಿದ್ಯಾಮಂತ್ರಿ ಶ್ರೀ ಬದ್ರಿನಾರಾಯಣ್‌ರವರು ಉದ್ಘಾಟಿಸುವರು.

★

ಕುಡುಕನ ದುಷ್ಕಾರ್ಯ

ಹೈದರಾಬಾದು— ಮಿಲಿಟರಿ ಇಂಜಿನಿಯರಿಂಗ್ ಸರ್ವಿಸ್ಸಿನ ಒಬ್ಬ ಸೂಪಾರ್ ಕುಡಿದು ಅಮಲಿನಲ್ಲಿ ಹುಚ್ಚುಚ್ಚಾಗಿ ಒಬ್ಬ ಸೈನ್ಯದ ಮೇಜರ್‌ನನ್ನು ಗುಂಡಿಕ್ಕಿ ಸಾಯಿಸಿ, ಒಬ್ಬ ಕಾರ್ಮಿಕನನ್ನು ತೀವ್ರ ಗಾಯಗೊಳಿಸಿದನು — ಇವನನ್ನು ಹತೋಟಿಗೆ ತರಲು ಸಾಧ್ಯವಾಗದೆ ಗುಂಡುಹೊಡೆದು ಕೊಲ್ಲಲಾಯಿತು

● ಕಾರ್ವಾರ್— ಮಟ್ಕಾ ಜೂಜು ನಡೆಸುತ್ತಿದ್ದ 11 ಮಂದಿ ಬಂಧಿಸಲ್ಪಟ್ಟಿ ಅವರಲ್ಲಿದ್ದ ರೂ 830 ಮತ್ತು ಇತರ ಪದಾರ್ಥಗಳು ವಶಪಡಿಸಿಕೊಳ್ಳಲಾಯಿತು

ಮಂತ್ರಿಗಳ ಮೇಲೆ ಕೋರ್ಟು ಅವಹೇಳನೆ ಮಾಡಿದ ಆಪಾದನೆ

ನವದೆಹಲಿ— ಭಾರತ ಉಕ್ಕು ಮಂತ್ರಿ ಶ್ರೀ ಕುಮಾರಮಂಗಳಂ ಮತ್ತು ಪಶ್ಚಿಮ ಬಂಗಾಳ ಮುಖ್ಯ ಮಂತ್ರಿ ಶ್ರೀ ಸಿದ್ಧಾರ್ಥ ಶಂಕರ ರೇರವರು ಈಚೆಗೆ ಅಹಮದಾಬಾದಿನಲ್ಲಿ ಮಾಡಿದ ಭಾಷಣದಲ್ಲಿ ಕೋರ್ಟು ಅವಹೇಳನೆ ಇರುವುದರಿಂದ ಅವರ ಮೇಲೆ ಕ್ರಮ ಜರುಗಿಸಬೇಕೆಂದು ಒಬ್ಬ ಪತ್ರಿಕೋದ್ಯೋಗಿಯವರು ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಹಾಕಿರುವರು — ಈ ವಿಷಯ ಪರಿಶೀಲನೆಗೆ ತಮ್ಮ ಸಂಘದ ತುರ್ತು ಸಭೆ ಕರೆಯಲು ಸುಪ್ರೀಂ ಕೋರ್ಟು ವಕೀಲರ ಸಂಘದ 40 ಸದಸ್ಯರು ಮಾಡಿಕೊಂಡ ಮನವಿಗೆ ಸಂಘದ ಅಧ್ಯಕ್ಷರಾದ ಶ್ರೀ ಚಾಗ್ಲಾರವರು ಸಮ್ಮತಿಸಿರುವರು.

○

ಸನ್ಯಾಸಿನಿ ಮೇಲೆ ಕಾಮಿಯುವ ಎಣ್ಣೆ ಹುಯ್ದ ಪ್ರಸಂಗ

ತ್ರಿಚೂರು— ಕೇರಳದಲ್ಲಿಯ ಎಲ್ಲಾ ಕಾನ್ವೆಂಟುಗಳ ಕೆಲಸಕಾರ್ಯಗಳ ಬಗ್ಗೆ ತನಿಖೆ ನಡೆಯಬೇಕೆಂದು ದಂಗೆಗೋರ ಕ್ಯಾಥಲಿಕ್ ಗುರು ಫಾದರ್ ಜೋಸೆಫ್ ವಡಕ್ಕಾ ಕೇಳಿಕೆ ಹಾಕಿರುವರು — ಕೊಟ್ಟಿಯಂ ಜಿಲ್ಲೆಯ ಒಂದು ಕಾನ್ವೆಂಟಿನಲ್ಲಿ ಒಬ್ಬಳು ಸನ್ಯಾಸಿನಿಯ ಮೇಲೆ, 6 ಸನ್ಯಾಸಿನಿಯರು ಮತ್ತು ಒಬ್ಬ ಗುರುವಿನ ಪ್ರೇರಣೆಯಂತೆ ಒಬ್ಬಳು ಹೆಣ್ಣಾಳು ಗುದಿಯುವ ಎಣ್ಣೆ ಹುಯ್ದಿದ್ದು ಅವಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವಳು : ಈ ದುಷ್ಕಾರ್ಯಕ್ಕೆ ಸಂಬಂಧಿಸಿದ 7 ಮಂದಿಯ ಮೇಲೆ ಪೋಲೀಸರು ಕೇಸ್ ರಿಜಿಸ್ಟರ್ ಮಾಡಿಕೊಂಡಿದ್ದಾರೆ.

● ಷಿಲಾಂಗ್— ಅಸ್ಸಾಂನ ಕಾಸಾ ಸಂಬಂಧದ ಗಲಭೆಗಳಲ್ಲಿ ಅಗ್ನಿಸ್ಪರ್ಶ, ಲೂಟಿ ಹೆಚ್ಚಾಗಿದ್ದು, ಅಡಗಿಸಲು ಪೋಲೀಸರ ಸಹಾಯಕ್ಕೆ ಸೈನ್ಯ ಕಳುಹಿಸಲಾಗಿದೆ.

ಇಂದಿರಾ—ವಿನೋಬಾರ ಭೇಟಿ

ಸೇವಾಗ್ರಾಮ— ಪ್ರಧಾನಿ ಇಂದಿರಾರವರು ಪೌನಾರಿನಲ್ಲಿನ ಪರಂಧಾಮ ಆಶ್ರಮದಲ್ಲಿ ಆಚಾರ್ಯ ವಿನೋಬಾ ಭಾವೆಯವರನ್ನು ಭೇಟಿ ಮಾಡಿ, ಅವರೊಂದಿಗೆ 25 ನಿಮಿಷ ಮಾತುಕತೆ ನಡೆಸಿದರು.

★

ಶಿಕ್ಷಣದಲ್ಲಿ ಬದಲಾವಣೆ

ಸೇವಾಗ್ರಾಮ— ಕೇಂದ್ರ ವಿದ್ಯಾ ಸಚಿವಾಲಯವು, ವಿದ್ಯೆಯು ಹೆಚ್ಚು ಕಾರ್ಯಸಾಧಕವಾಗುವ ಮತ್ತು ಜನತೆಗೆ ಅವಶ್ಯಕವಾಗುವ ರೀತಿಯಲ್ಲಿ ಶಿಕ್ಷಣದ ಬದಲಾವಣೆ ಬಗ್ಗೆ ಯೋಚಿಸುತ್ತಿರುವದೆಂದು ಪ್ರಧಾನಿ ಇಂದಿರಾರವರು ಹೇಳಿದರು.

○

ರಾಜ್ಯೋತ್ಸವ

ಮೈಸೂರು— ಕನ್ನಡ ರಾಜ್ಯೋತ್ಸವವು ಪೌರಸಭಾಧ್ಯಕ್ಷ ಶ್ರೀ ಸೋಮಸುಂದರ್ ರವರ ಅಧ್ಯಕ್ಷತೆಯಲ್ಲಿ ವೈಭವವಾಗಿ ನೆರವೇರಿಸಲಾಗುವುದು — ಅವರ ಅಧ್ಯಕ್ಷತೆಯಲ್ಲಿ ರಾಜ್ಯೋತ್ಸವ ಸಮಾರಂಭ ಸಮಿತಿ ಸ್ಥಾಪಿಸಲಾಗಿದೆ.

★

ಸರಿಯಾದ ತೀರ್ಪು

ನವದೆಹಲಿ— ತಮ್ಮ ಮತದ ಸಂಪ್ರದಾಯವನ್ನು ಅನುಸರಿಸುವುದು ವ್ಯಕ್ತಿಯ ನಂಬಿಕೆಯೊದೂ, ಅದು ದೇಶದ ಸಂರಕ್ಷಣೆಗೆ ಅಪಾಯಕಾರಿಯೆಂದು ಭಾವಿಸಲಾಗದೆಂದೂ, ಸಿಂಧ್ ಮತ್ತು ಬೆಲೂಚಿಸ್ಥಾನ ಹೈ ಕೋರ್ಟು ತೀರ್ಪಿತ್ತು, ಅಪೀಲಿನ ಹಿಂದೂ ನಿವಾಸಿ ಈಶ್ವರಲಾಲರ ಬಿಡುಗಡೆಗೆ ಆಜ್ಞೆ ಮಾಡಿತು.

ಮಂಗಳೂರು— ದೇಶದ ಆರ್ಥಿಕಾಭಿವೃದ್ಧಿಗೆ ಇನ್ನೂ ತುಂಬಾ ರೈಲ್ವೇ ಲೈನುಗಳು ಅವಶ್ಯಕವೆಂದು ರೈಲ್ವೇ ಮಂತ್ರಿ ಶ್ರೀ ಟಿ. ಎ. ಪೈ ಹೇಳಿದರು.

ರೈತ ಮತ್ತು ಕಾರ್ಮಿಕ ಸೇವಾ ಸಂಘ

ರೈತ ಮತ್ತು ಕಾರ್ಮಿಕ ಸೇವಾ ಸಂಘದ ಕಾರ್ಯಕಾರಿ ಸಮಿತಿ ಸಭೆ ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ. ಜಂಬೂಗೌಡರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿ, " ರೈಲ್ವೆಯಲ್ಲಿ ರೂ. 26 ಕೋಟಿ ಖೋತಾ ಅಂದಾಜು ಬರುತ್ತಿದ್ದುದನ್ನು ದಕ್ಷತೆಯಿಂದ ಹೋಗಲಾಡಿಸಿ, ಕೇವಲ ಅಲ್ಪ ಅಧಿಕಾರ ಅವಧಿಯಲ್ಲಿ ರೂ. 37 ಕೋಟಿ ಲಾಭ ಗಳಿಸಿಕೊಟ್ಟ ಶ್ರೀ ಕೆ. ಹನುಮಂತಯ್ಯನವರನ್ನು ವಿನಾಕಾರಣ ರೈಲ್ವೆ ಮಂತ್ರಿತ್ವಕ್ಕೆ ರಾಜೀನಾಮೆ ಕೊಡುವಂತೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಮಾಡಿದ್ದನ್ನು ಈ ಸಭೆ ಪ್ರತಿಭಟಿಸುತ್ತದೆ " ಎಂಬ ನಿರ್ಣಯ ಅಂಗೀಕರಿಸಿದೆ.

ಮಹಾ ಚುನಾವಣೆ ನಡೆದು ಒಂದು ವರ್ಷದ ಮೇಲ್ಪಟ್ಟು ಆದರೂ, ರಾಜ್ಯಗಳಲ್ಲಿ ಅಡಳಿತ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದಾಗ್ಯೂ, " ಗರೀಬಿ ಹಟಾವೋ "ಗೆ ಸ್ವಲ್ಪವಾದರೂ ಕಾರ್ಯಾಚರಣೆ ನಡೆಯದ ಕಾರಣ ಈ ಸಭೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ಅವಿಶ್ವಾಸ ವ್ಯಕ್ತಪಡಿಸುತ್ತದೆ

ಮಂಡ್ಯ ಕ್ಷೇತ್ರದಿಂದ ಲೋಕಸಭೆಗೆ ನಡೆಯಲಿರುವ ಉಪ ಚುನಾವಣೆಯಲ್ಲಿ ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಶ್ರೀನಿವಾಸ್‌ರವರಿಗೆ ಬೆಂಬಲಿಸಬೇಕೆಂದು ಈ ಸಭೆ ಅಲ್ಲಿನ ಮತದಾರರನ್ನು ಪ್ರಾರ್ಥಿಸುತ್ತದೆ.

ದೇಶದಲ್ಲಿ ಶಾಂತಿ ಮತ್ತು ಸೌಮ್ಯದಿ ದೃಷ್ಟಿಯಿಂದ ಭೂ ಸುಧಾರಣೆ ಕಾರ್ಯಕ್ರಮವನ್ನು ಕೈಬಿಡುವಂತೆ ಈ ಸಭೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ, ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸ್, ಶಾಸನಸಭೆ ಕಾಂಗ್ರೆಸ್ ಪಕ್ಷ ಮತ್ತು ಶಾಸನಸಭಾ ಸದಸ್ಯರನ್ನು ಈ ಸಭೆ ಒತ್ತಾಯಪಡಿಸುತ್ತದೆ.

ವುಡ್‌ಲಾಂಡ್ 13-10-72 ರಿಂದ ಅಮೋಘ 3 ನೇ ವಾರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಜವಾನಿ ದಿವಾನಿ

ಪಾತ್ರ :- ರಣಧೀರ ಕಪೂರ್, ಜಯಭಾದುರಿ

ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10 30 ಕ್ಕೆ :- ಮಲ್ಲಿಮದುವೆ

ಅಪೆರಾ 13 10 72 ರಿಂದ

ಬಾಂಧವ

ಪಾತ್ರ : ಅಶ್ವತ್, ಗಂಗಾಧರ್, ರಾಜೇಶ್, ಬಿ. ವಿ ರಾಧ, ಪಂಡರೀಬಾಯಿ, ಸಂಧ್ಯಾರಾಣಿ, ಜಯಶ್ರೀ, ರಮಾದೇವಿ, ಕುಪ್ಪುರಾಜ್, ರಮೇಶ್, ಮಂಜುನಾಥ್

ಸಂಗೀತ – ರತ್ನಂ ನಿರ್ದೇಶನ : ರತ್ನಾಕರ–ಮಧು

ದಿನ 3 ಪ್ರದರ್ಶನಗಳು

Help The Gorakshana

— Humanitarian Propoganda Monthly

Protect the Cow

ದಸರಾ ಸಾಂಸ್ಕೃತಿಕ ಕಾರ್ಯಕ್ರಮ

15 10 72

ಮದ್ರಾಸಿನ

ಟಿ. ಎನ್. ಕಪ್ಪನ್ ಮತ್ತು ಚಂದ್ರಶೇಖರನ್

ಇವರಿಂದ

ಕರ್ನಾಟಕ ಇನ್‌ಸ್ಟ್ರುಮೆಂಟಲ್

16 10 72

ಬೊಂಬಾಯಿನ

ಪರ್ವೀನ್ ಸುಲ್ತಾನ

ಇವರಿಂದ

ಹಿಂದೂಸ್ತಾನಿ ಹಾಡುಗಾರಿಕೆ

18 10 72

ಮದ್ರಾಸಿನ

ಯಾಮಿನಿ ಕೃಷ್ಣಮೂರ್ತಿ

ಇವರಿಂದ

ಭರತನಾಟ್ಯಂ

(ಕುಚುಪುಡಿ)

ಸ್ಥಳ : ಕ್ಯಾಥಡ್ರಲ್ ಭವನ

' ಮೊನವನು ಕೀಳು ಸೃಷ್ಟಿಯ ಕಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಹ ಧರ್ಮಕರ್ತ

— ಮಹಾತ್ಮಾ ಗಾಂಧಿ

ಅದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಜ್ಜಲು ಚಿತ್ರ

ಅನೆ – ಹುಡುಗ

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore